# ಮಹಿಳೆಯರಿಗಾಗಿ ‘ಟೈಟಾನ್ ರಾಗ’




ವಾಚ್ (ಕೈ ಗಡಿಯಾರ) ಕ್ಷೇತ್ರದಲ್ಲಿ ತನ್ನದೇ ಗುರುತು ಮೂಡಿಸಿರುವ ‘ಟೈಟಾನ್ ರಾಗ’ ಮಹಿಳಾ ಗ್ರಾಹಕರನ್ನು ಸೆಳೆಯುವ ಸಲುವಾಗಿ ‘ಫೆಸೆಟ್ಸ್’ ಸರಣಿಯ ಹೊಸ ವಾಚ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ.

ಈ ಸರಣಿಯಲ್ಲಿ ಐಷಾರಾಮಿ ಲುಕ್‌ನಲ್ಲಿ ಕಣ್ಮನ ಸೆಳೆಯುವ, ವಿಶೇಷವಾಗಿ ಮಹಿಳೆಯರಿಗೆಂದೇ ತಯಾರಿಸಿರುವ 12 ವಿವಿಧ ವಾಚ್‌ಗಳು ಮಾರುಕಟ್ಟೆಯಲ್ಲಿ ಲಭ್ಯ. ಈ ನೂತನ ವಾಚ್‌ಗಳು, ದೇಶದ ಆಧುನಿಕ ಮಹಿಳೆಯರ ವ್ಯಕ್ತಿತ್ವ ಹಾಗೂ ಜೀವನಶೈಲಿಯನ್ನು ಬಿಂಬಿಸುವಂತಿವೆ. ಆಧುನಿಕ ಶೈಲಿಯ ವಿನ್ಯಾಸ, ಉತ್ತಮ ಕರಕುಶಲತೆಯನ್ನು ಈ ವಾಚ್‌ಗಳು ಒಳಗೊಂಡಿದ್ದು, ಮೊದಲ ನೋಟದಲ್ಲೇ ಕಣ್ಮನ ಸೆಳೆಯುತ್ತವೆ. ಈ ವಾಚ್‌ಗಳ ಉತ್ಕೃಷ್ಟತೆಯು ಮಹಿಳೆಯ ಬಹುಮುಖ ವ್ಯಕ್ತಿತ್ವದ ಸೂಕ್ಷ್ಮ ವ್ಯತ್ಯಾಸಗಳನ್ನು ಗುರುತಿಸುತ್ತದೆ. ಡೀಪ್ ಪ್ಲಮ್, ಪ್ಯುನೆ, ರೋಸ್ ಗೋಲ್ಡ್, ಗೋಲ್ಡ್ ಬಣ್ಣಗಳಲ್ಲಿ ಲಭ್ಯವಿದೆ.

ಈ ವಿನ್ಯಾಸಗಳು, ಸಮಕಾಲಿನ ವಿನ್ಯಾಸಗಳಾದ ಸ್ವರೋಸ್ಕಿ ಕ್ರಿಸ್ಟಲ್ಸ್, ಮದರ್ ಆಫ್ ಪರ್ಲ್, ರೋಸ್ ಗೋಲ್ಡ್ ಪ್ಲೇಟಿಂಗ್ ಸೇರಿದಂತೆ ವಿವಿಧ ವಿನ್ಯಾಸಗಳಲ್ಲಿ ರೂಪುಗೊಂಡಿವೆ. ಫೆಸೆಟ್ಸ್ ಸಂಗ್ರಹವು ಟೈಟಾನ್ ರಾಗದ ಮಾಡರ್ನ್ ಹಾಗೂ ಬ್ರ್ಯಾಂಡ್‌ನ ಸಿಗ್ನೇಚರ್ ಸ್ಟೈಲ್ ಆಗಿದೆ.



ಫೆಸೆಟ್ಸ್ ಸಂಗ್ರಹದ ಬಿಡುಗಡೆಯ ಜೊತೆಗೆ ‘ಟೈಟಾನ್ ರಾಗ’ವು ಬ್ರ್ಯಾಂಡ್ ರೂಪದ ಹೊಸ ಪ್ಲೇಟಿಂಗ್‌ನ ‘ಫಾರೆಸ್ಟ್ ಗ್ರೀನ್’ ಬಣ್ಣವನ್ನೂ ವಾಚ್ ಕ್ಷೇತ್ರದಲ್ಲಿ ಇದೇ ಮೊದಲ ಬಾರಿಗೆ ಪರಿಚಯಿಸಿದೆ.

ಹೊಸ ಗಡಿಯಾರಗಳು ‘ವರ್ಲ್ಡ್ ಆಫ್ ಟೈಟಾನ್’ ಮಳಿಗೆಗಳಲ್ಲೆಲ್ಲ ಲಭ್ಯ. ಜೊತೆಗೆ ಪ್ರಮುಖ ಡಿಪಾರ್ಟ್‌ಮೆಂಟ್ ಸ್ಟೋರ್‌ಗಳಲ್ಲಿ, ಆನ್‌ಲೈನ್ ಮಾರಾಟ ಕಂಪನಿಗಳಲ್ಲಿ ಹಾಗೂ ಅಧಿಕೃತ ಕಂಪನಿಯ ಡೀಲರ್‌ಗಳ ಮಳಿಗೆಗಳಲ್ಲಿ ಈ ವಾಚ್‌ಗಳನ್ನು ಖರೀದಿಸಬಹುದು. ಬೆಲೆ ₹5,495 ರಿಂದ ₹15,995 ರೇಂಜ್‌ನಲ್ಲಿ ಇದೆ.

ಜ್ಯುವೆಲ್ಲರಿ, ಕನ್ನಡಕ ಹಾಗೂ ಸೀರೆಗಳ ವ್ಯಾಪಾರದಲ್ಲಿ ಸಮಗ್ರವಾಗಿ ತೊಡಗಿಕೊಂಡಿರುವ ಟೈಟಾನ್ ಕಂಪನಿಯು ಸದ್ಯ ದೇಶದ ಅತಿ ಹೆಚ್ಚು ವಾಚ್‌ಗಳ ತಯಾರಿಕಾ ಹಾಗೂ ಮಾರಾಟ ಕಂಪನಿ ಎಂದು ಹೇಳಿಕೊಂಡಿದೆ. ■





ತಿಥಿ, ವಾರ, ನಕ್ಷತ್ರ,
ಪ್ರಮುಖ ಉತ್ಸವ,
ಸರ್ಕಾರಿ ರಜೆಗಳ
ಸ್ಪಷ್ಟ ವಿವರ




ಬೆಲೆ ₹30 ಮಾತ್ರ

ವರ್ಷದ ಸಮಗ್ರ ಮಾರ್ಗದರ್ಶಿ

2020

ದಿನದರ್ಶಿಕೆ ಮಾರುಕಟ್ಟೆಯಲ್ಲಿ ಲಭ್ಯ

ಪ್ರತಿಗಳಿಗಾಗಿ ಸಂಪರ್ಕಿಸಿ: ನಿಮ್ಮ ನ್ಯೂಸ್ ಏಜೆಂಟರು, ಪುಸ್ತಕದ ಅಂಗಡಿಗಳು ಅಥವಾ ನಮ್ಮ ಕಚೇರಿಗಳು:

ದಿ ಪ್ರಿಂಟರ್ಸ್(ಮೈಸೂರು) ಪ್ರೈ.ಲಿ., 75, ಎಂ.ಜಿ. ರಸ್ತೆ, ಬೆಂಗಳೂರು-560 001.

ದೂರವಾಣಿ: 45557199/219/227.

ಶಾಖೆಗಳು: ಮೈಸೂರು: 2420532/2420129.

ಹುಬ್ಬಳ್ಳಿ: 2372081/2372516. ಮಂಗಳೂರು: 2215852/2218334.

ಕಲ್ಬುರ್ಗಿ: 255539/ 221808. ದಾವಣಗೆರೆ: 230846/255048